## ಪ್ರಾಣಿಹತ್ಯೆ ಮಹಾಪಾಪ

ತಿಮ್ಮನಿಗೆ ಜ್ವರ–ಕೆಮ್ಮು ಕಾಡಿತು. ಮನೆಯ ಹತ್ತಿರದಲ್ಲೇ ಇರುವ, ಹೊಸದಾಗಿ ಆರಂಭವಾದ ಕ್ಲಿನಿಕ್‌ಗೆ ಹೋದ. ಆ ವೈದ್ಯರನ್ನು ಎಲ್ಲೊ ನೋಡಿದ ನೆನಪು ಮಾಡಿಕೊಂಡ. ಅನಂತರ ಕೇಳಿದ, 'ಸರ್ ನೀವು ಮುಂಚೆ ಪ್ರಾಣಿಗಳ ಡಾಕ್ಟರ್ ಆಗಿದ್ರಿ ಅಲ್ವಾ?' ಎಂದು. ಅದಕ್ಕೆ ವೈದ್ಯ, 'ಹೌದು, ಪ್ರಾಣಿಹತ್ಯೆ ಮಹಾಪಾಪ, ಅದಕ್ಕೇ ಈಗ ಮನುಷ್ಯರ ವೈದ್ಯನಾಗಿದ್ದೀನಿ' ಎನ್ನಬೇಕೆ?

**ವಿದ್ಯಾ ಎನ್. ಪೈ**





ಚಿತ್ರಗಳು: ಗಣೇಶ ಆಚಾರ್ಯ

## ಚೊಂಬಿನೊಳಗೆ ಅಂಕ

ಅಂದು ರಂಗನಿಗೆ ಡ್ರಾಯಿಂಗ್ ಪರೀಕ್ಷೆ ಇತ್ತು. ಬಕೆಟ್ ಚಿತ್ರಕ್ಕೆ 10 ಅಂಕ ಹಾಗೂ ಚೊಂಬಿನ ಚಿತ್ರಕ್ಕೆ 5 ಅಂಕ ಎಂದಿತ್ತು. ಕಷ್ಟಪಟ್ಟು ಬಕೆಟ್ ಚಿತ್ರ ಬರೆದ. ಏನು ಮಾಡಿದರೂ ಅವನಿಗೆ ಚೊಂಬಿನ ಚಿತ್ರ ಬಿಡಿಸಲು ಬರಲಿಲ್ಲ. ಕೊನೆಗೆ ಬಕೆಟ್ ಚಿತ್ರ ಬರೆಯಲಾಗಿದೆ. ಚೊಂಬು ಬಕೆಟ್ ಒಳಗೆ ಇದೆ ಎಂದು ಬರೆದ. ಗುರುಗಳು, 'ಬಕೆಟ್‌ಗೆ 10 ಅಂಕ ನೀಡಲಾಗಿದೆ. ಚೊಂಬಿನ ಐದು ಅಂಕಗಳನ್ನು ಚೊಂಬಿನೊಳಗೇ ಹಾಕಲಾಗಿದೆ' ಎಂದು ಬರೆದರು.

**ಶೋಭಾ ಪ್ರಮೋದ್**